## ಪ್ರಕರಣವನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಲಿದ್ದೇವೆ ಎಂದ ಗೃಹ ಸಚಿವ ಬಸವರಾಜ ಬೊಮ್ಮಾಯಿ

# ತಪ್ಪಿತಸ್ಥರು ಯಾರೇ ಆದರೂ ಬಿಡುವುದಿಲ್ಲ

■ ವಿಕ ಸುದ್ದಿಲೋಕ ಬೆಂಗಳೂರು

ಕರ್ನಾಟಕ ಲೋಕಸೇವಾ ಆಯೋಗದ ಎಫ್‌ಡಿಎ ಹುದ್ದೆಗಳ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆ ಮಾಡಿದವರ ವಿರುದ್ಧ ಕಾನೂನು ಪ್ರಕಾರ ಕಠಿಣ ಕ್ರಮ ಜರುಗಿಸಲಾಗುವುದು. ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಎಲ್ಲ ಆಯಾಮಗಳಿಂದಲೂ ತನಿಖೆ ನಡೆಸಲಾಗುತ್ತಿದೆ ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ತಿಳಿಸಿದರು.



ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣ

ನಗರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿ, "ಪ್ರಕರಣದಲ್ಲಿ ಯಾರ್ಯಾರು ಭಾಗಿಯಾಗಿದ್ದಾರೆಂಬ ಬಗ್ಗೆ ಇಂಚಿಂಚೂ ಮಾಹಿತಿ ಕಲೆ ಹಾಕಲಾಗಿದ್ದು, ತಪ್ಪಿತಸ್ಥರು ಎಷ್ಟೇ ಪ್ರಭಾವಿಗಳಾದರೂ ಕಾನೂನು ಕ್ರಮದಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಶೀಘ್ರವೇ ಪ್ರಕರಣದ ಹಿಂದಿರುವ ಎಲ್ಲ ಆರೋಪಿಗಳನ್ನು ಬಂಧಿಸಲಾಗುವುದು," ಎಂದರು.



"ಆರೋಪಿಗಳು ಪ್ರಶ್ನೆಪತ್ರಿಕೆಗಳನ್ನು ಆರ್. ಆರ್.ನಗರದ ಫ್ಲ್ಯಾಟ್ ಒಂದರಲ್ಲಿಟ್ಟು ಹಣಕ್ಕಾಗಿ ಕೆಲವರಿಗೆ ಮಾರಿಕೊಳ್ಳಲು ಮುಂದಾಗಿದ್ದರೆಂಬ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಸಿಸಿಬಿ ಪೊಲೀಸರು ಹಲವರನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ವಿಷಯ ತನಿಖಾ ಹಂತದಲ್ಲಿರುವುದರಿಂದ ಹೆಚ್ಚಿನ ಮಾಹಿತಿ ನೀಡುವುದು ಸರಿಯಲ್ಲ. ಈ ಪ್ರಕರಣವನ್ನು ನಾವು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಲಿದ್ದೇವೆ," ಎಂದು ಹೇಳಿದರು.

"ಈಗಾಗಲೇ ಸಿಸಿಬಿ ಪೊಲೀಸರು ಹಲವರನ್ನು ಬಂಧಿಸಿ ವಿಚಾರಣೆಗೊಳಪಡಿಸಿದ್ದಾರೆ. ಪ್ರಕರಣದಲ್ಲಿ ಯಾರ್ಯಾರು ಭಾಗಿಯಾಗಿದ್ದಾರೆ ಎಂಬ ಬಗ್ಗೆ ಸಮಗ್ರ ಮಾಹಿತಿ ಕಲೆ ಹಾಕಲು ತನಿಖಾಧಿಕಾರಿಗಳಿಗೆ ಸೂಚನೆ ಕೊಡಲಾಗಿದೆ. ಯಾರನ್ನೂ ರಕ್ಷಿಸುವ ಪ್ರಶ್ನೆಯೇ ಇಲ್ಲ. ಈ ಪ್ರಕರಣದಲ್ಲಿ ಯಾರೇ ಎಷ್ಟೇ ಪ್ರಭಾವಿಗಳು ಶಾಮೀಲಾಗಿದ್ದರೂ ಅವರ ವಿರುದ್ಧ ನಿರ್ದಾಕ್ಷಿಣ್ಯ ಕಾನೂನು ಕ್ರಮ ಕೈಗೊಳ್ಳಲಾಗುವುದು," ಎಂದರು.

"ಪ್ರಶ್ನೆ ಪತ್ರಿಕೆಗಳನ್ನು ಅತ್ಯಂತ ಸುರಕ್ಷಿತ ಸ್ಥಳಗಳಲ್ಲಿಡಲಾಗಿತ್ತು. ಆದರೂ ಹೇಗೆ ಸೋರಿಕೆಯಾಯಿತು, ಇದರ ಹಿಂದೆ ಯಾರಿದ್ದಾರೆ, ಈ ವ್ಯಕ್ತಿಗಳಿಗೆ ಬೆಂಬಲ ಕೊಟ್ಟವರು ಯಾರು ಎಂಬುದರ ಬಗ್ಗೆ ಕೂಲಂಕಷವಾಗಿ ತನಿಖೆ ನಡೆಸಲಿದ್ದೇವೆ. ಇಂತಹ ಪ್ರಕರಣಗಳು ಮರುಕಳಿಸದಂತೆ ಸರಕಾರ ಬಿಗಿ ಕ್ರಮಗಳನ್ನು ಕೈಗೊಳ್ಳಲಿದೆ," ಎಂದು ತಿಳಿಸಿದರು.



ಬಾಗಲಕೋಟೆ ಕೇಂದ್ರಕ್ಕೆ ಆಗಮಿಸಿದ್ದ ಅಭ್ಯರ್ಥಿಗೆ ಪರೀಕ್ಷೆ ರದ್ದಾದ ಬಗ್ಗೆ ಮಾಹಿತಿ ನೀಡಿದ ಸಿಬ್ಬಂದಿ.

## ಅಭ್ಯರ್ಥಿಗಳ ದಾರಿಗೆ ಸುಂಕವಿಲ್ಲ

**ಬಾಗಲಕೋಟೆ:** ಜಿಲ್ಲೆಯ ಬಾಗಲಕೋಟೆ ಹಾಗೂ ಜಮಖಂಡಿ ಕೇಂದ್ರಗಳಲ್ಲಿ ಅಂದಾಜು 20 ಸಾವಿರ ಅಭ್ಯರ್ಥಿಗಳು ಭಾನುವಾರ ಪರೀಕ್ಷೆ ಎದುರಿಸಲಿದ್ದರು. ಬಾಗಲಕೋಟೆಯ ಬವಿವ ಸಂಘದ ಕಾಲೇಜ್‌ಗಳ ಕ್ಯಾಂಪಸ್‌ನಲ್ಲಿ ಬೆಳಗ್ಗೆ 50ಕ್ಕೂ ಹೆಚ್ಚು ಅಭ್ಯರ್ಥಿಗಳು ಬಂದಿದ್ದರು. ಈ ಪೈಕಿ ಹಲವರಿಗೆ ಪರೀಕ್ಷೆ ಮುಂದೂಡಿದ ಬಗ್ಗೆ ಮಾಹಿತಿಯಿರಲಿಲ್ಲ. ಇನ್ನು ಕೆಲವರು ಮಾಹಿತಿಯಿದ್ದರೂ ಪರೀಕ್ಷೆ ರದ್ದತಿ ಖಚಿತಪಡಿಸಿಕೊಳ್ಳಲು ಕೇಂದ್ರಕ್ಕೆ ಬಂದಿದ್ದರು.

ರಾಯಚೂರು, ಧಾರವಾಡ ಸೇರಿದಂತೆ ನಾನಾ ಭಾಗಗಳಿಂದ ಅಭ್ಯರ್ಥಿಗಳು ಬಂದಿದ್ದರು. ಶನಿವಾರ ರಾತ್ರಿಯೇ ತಮ್ಮೂರಿನಿಂದ ಹೊರಟಿದ್ದ ಅವರು ಅರ್ಧ ದಾರಿಯಲ್ಲಿದ್ದಾಗ ಪರೀಕ್ಷೆ ರದ್ದಾದ ಬಗ್ಗೆ ಮಾಹಿತಿ ದೊರೆತಿತ್ತು. ಹೀಗಾಗಿ ಬಾಗಲಕೋಟೆಗೆ ಬಂದಿಳಿದ ನಂತರ ಕೇಂದ್ರದತ್ತ ನೋಡಿಕೊಂಡು ಹೋಗಲು ಬಂದಿದ್ದರು. ಪರೀಕ್ಷೆ ನಡೆಯದ ಕಾರಣ ಅಧಿಕಾರಿಗಳು ಕೇಂದ್ರದ ಬಳಿ ಇರಲಿಲ್ಲ. ಪರೀಕ್ಷೆ ಇಲ್ಲ ಎನ್ನುವುದನ್ನು ಮತ್ತೊಮ್ಮೆ ಖಚಿತಪಡಿಸಿಕೊಂಡ ಅಭ್ಯರ್ಥಿಗಳು ಬಂದ ದಾರಿಗೆ ಸುಂಕವಿಲ್ಲ ಎಂದು ತಮ್ಮೂರಿಗೆ ತೆರಳಲು ಬಸ್ ನಿಲ್ದಾಣಕ್ಕೆ ವಾಪಸಾದರು.

ಧಾರವಾಡದಿಂದ ಬಂದಿದ್ದ ಶರಣ ಪಾಟೀಲ "ಅರ್ಧ ದಾರಿಯಲ್ಲಿದ್ದಾಗ ಪರೀಕ್ಷೆ ಕ್ಯಾನ್ಸಲ್ ಆಗಿದೆ ಎನ್ನುವುದು ಗೊತ್ತಾಯಿತು. ಹೇಗೂ ಬಂದಿದ್ದೇವೆ, ಕೇಂದ್ರಕ್ಕೆ ತೆರಳಿ ಖಚಿತಪಡಿಸಿಕೊಳ್ಳೋಣ ಎಂದು ಇಲ್ಲಿ ಬಂದೆವು. ಕೆಪಿಎಸ್ಸಿಯಲ್ಲಿ ಅಕ್ರಮದಿಂದಾಗಿ ಎಕ್ಸಾಂ ರದ್ದು ಮಾಡಿರುವುದು ಅವಮಾನಕರ. ಇಂತಹ ಪ್ರವೃತ್ತಿಯಿಂದ ಸಾವಿರಾರು ಅಭ್ಯರ್ಥಿಗಳು ತೊಂದರೆ ಅನುಭವಿಸಬೇಕಾಗುತ್ತದೆ," ಎಂದರು.

ರಾಜ್ಯಾದ್ಯಂತ ಹಲವಾರು ಪರೀಕ್ಷೆಗಳ ಪ್ರಶ್ನೆ ಪತ್ರಿಕೆ ಸೋರಿಕೆಯಾಗುತ್ತಿರುವುದು ಸರಕಾರದ ಆಡಳಿತದ ವೈಖರಿ ಹೇಗಿದೆ ಎಂಬುವುದನ್ನು ತೋರಿಸುತ್ತದೆ. ಪತ್ರಿಕೆ ಸೋರಿಕೆಯಿಂದ ಲಕ್ಷಾಂತರ ವಿದ್ಯಾರ್ಥಿಗಳು ಸಂಕಷ್ಟ ಎದುರಿಸುವ ಪರಿಸ್ಥಿತಿ ಬಂದೊದಗಿದೆ.

-ಎಚ್.ಡಿ. ಕುಮಾರಸ್ವಾಮಿ
ಮಾಜಿ ಮುಖ್ಯಮಂತ್ರಿ

ಪ್ರಶ್ನೆ ಪತ್ರಿಕೆ ಸೋರಿಕೆ ಮೂಲವನ್ನು ಪತ್ತೆ ಮಾಡಲಾಗುತ್ತಿದೆ. ಕೆಪಿಎಸ್‌ಸಿಯ ದ್ವಿತೀಯ ದರ್ಜೆ ಸಹಾಯಕನೊಬ್ಬನನ್ನು ವಶಕ್ಕೆ ಪಡೆಯಲಾಗಿದೆ. ತನಿಖೆ ಮುಂದುವರಿದಿದೆ.

- ಸಂದೀಪ್ ಪಾಟೀಲ್
ಜಂಟಿ ಪೊಲೀಸ್ ಆಯುಕ್ತ, ಸಿಸಿಬಿ

## ಹಣ ನೀಡದವರಿಂದ ಅಂಕಪಟ್ಟಿ ಆಟ!

**ಬೆಂಗಳೂರು:** ಪ್ರಶ್ನೆಪತ್ರಿಕೆ ಸೋರಿಕೆ ಆರೋಪಿ ಚಂದ್ರು, ಫಲಾನುಭವಿಗಳ ಅಂಕಪಟ್ಟಿಗಳನ್ನು ತನ್ನ ಬಳಿ ಇಟ್ಟುಕೊಂಡಿರುವುದು ತನಿಖೆ ವೇಳೆ ಬೆಳಕಿಗೆ ಬಂದಿದೆ.

ಚಂದ್ರು ಮನೆಯಲ್ಲಿ ಕುಳಿತು ಪ್ರಶ್ನೆಗಳಿಗೆ ಉತ್ತರ ಪಡೆಯುತ್ತಿದ್ದ ಐದಾರು ಆರೋಪಿಗಳ ಪತ್ತನೇ ತರಗತಿ ಅಂಕಪಟ್ಟಿಗಳು ಚಂದ್ರು ಬಳಿ ಪತ್ತೆಯಾಗಿವೆ. ಕೂಡಲೇ ಹಣ ನೀಡಲು ಸಾಧ್ಯವಾಗದವರು ಚಂದ್ರುಗೆ ಅಂಕ ಪಟ್ಟಿ ನೀಡಿದ್ದಾರೆ. ಒಂದು ವೇಳೆ ಆಯ್ಕೆಯಾದರೆ ದಾಖಲಾತಿ ಪರಿಶೀಲನೆಗೆ ಕೆಪಿಎಸ್‌ಸಿಗೆ ನೀಡಬೇಕಾಗುತ್ತದೆ. ಈ ಸಂದರ್ಭದಲ್ಲಿ ಅಭ್ಯರ್ಥಿಗಳು ಹಣ ನೀಡಲೇಬೇಕಾಗುತ್ತದೆ ಎಂಬ ಐಡಿಯಾವನ್ನು ಚಂದ್ರು ಬಳಸಿದ್ದ ಎಂದು ಸಿಸಿಬಿ ಮೂಲಗಳು ತಿಳಿಸಿವೆ.

ಕೆಲವು ಅಭ್ಯರ್ಥಿಗಳು ಹಣ ನೀಡಿದರೆ ಮತ್ತೆ ಕೆಲವರು ಚೆಕ್ ಕೊಟ್ಟಿದ್ದಾರೆ. ಆ ಅಭ್ಯರ್ಥಿಗಳು ಪ್ರಶ್ನೋತ್ತರ ತಿಳಿದುಕೊಂಡ ನಂತರ ಬೇರೆಯವರಿಗೆ ಹಣಕ್ಕೆ ಮಾರಿಕೊಳ್ಳುತ್ತಿರಬಹುದು ಎನ್ನಲಾಗಿದೆ. ರಾಚಪ್ಪ ಬೆಳಗಾವಿಯವನಾಗಿದ್ದು, ಎಸ್‌ಡಿಎ ಪರೀಕ್ಷೆಯಲ್ಲಿ ಪ್ರಾವಿಷನಲ್ ಲಿಸ್ಟ್‌ನಲ್ಲಿ ಹೆಸರು ಬಂದಿತ್ತು. ಆದರೆ, ಅಡ್ಡದಾರಿ ಮೂಲಕ ಎಫ್‌ಡಿಎ ಆಗುವ ಯತ್ನದಲ್ಲಿದ್ದ.

**ಅಪಘಾತ ನೆಪ ಹೇಳಿ ದಾಳಿ:** ಆರೋಪಿ ಚಂದ್ರು ಶನಿವಾರ ಉಲ್ಲಾಳದ ಉಪ್ಕಾರ್ ಲೇಔಟ್‌ನಲ್ಲಿರುವ ತನ್ನ ಮನೆಯಲ್ಲಿ ಅಭ್ಯರ್ಥಿಗಳಿಗೆ ಉತ್ತರ ಹೇಳುತ್ತಿದ್ದ. ಈ ವೇಳೆ ಸಿಸಿಬಿ ಪೊಲೀಸರು ಏಕಾಏಕಿ ದಾಳಿ ನಡೆಸುವ ಬದಲು ಚಂದ್ರು ಅಪಘಾತ ಮಾಡಿ ಮನೆಗೆ ಬಂದಿದ್ದಾನೆ ಎಂಬ ನೆಪ ಹೇಳಿ ಉಪಾಯದಿಂದ ಹೊರಗೆ ಕರೆ ತಂದಿದ್ದರು. ಚಂದ್ರು ಪಾಲಕರು ವೃದ್ಧರಾಗಿದ್ದಾರೆ. ಏಕಾಏಕಿ ದಾಳಿ ನಡೆಸಿದರೆ ಆಘಾತಗೊಂಡು ತೊಂದರೆಯಾಗಬಹುದು ಎಂಬ ಕಾರಣಕ್ಕೆ ಈ ರೀತಿ ಮಾಡಿದ್ದಾರೆನ್ನಲಾಗಿದೆ.